# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1777 (2037) |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17/03/2022 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇಲ್ಲಿಯವರೆಗೆ ಕಾರ್ಮಿಕರ ವಂತಿಗೆಯಿಂದ ಸಂಗ್ರಹವಾಗಿರುವ ನಿಧಿಯ ಮೊತ್ತವೆಷ್ಟು; ಈ ನಿಧಿಯನ್ನು ಯಾವ ಸಂಸ್ಥೆ ನಿರ್ವಹಣೆ ಮಾಡುತ್ತಿದೆ; (ವಿವರ ನೀಡುವುದು) | ಕಾರ್ಮಿಕ ಕಲ್ಯಾಣ ಮಂಡಳಿಗೆ ಕಾರ್ಮಿಕ ಮತ್ತು ಮಾಲೀಕರು 20:40 ರ ಅನುಪಾತದಲ್ಲಿ ಪ್ರತಿ ಕಾರ್ಮಿಕರಿಂದ ರೂ 20/- ಮತ್ತು ಪ್ರತಿ ಕಾರ್ಮಿಕರಿಗೆ ಮಾಲೀಕರಿಂದ ರೂ 40- ರಂತೆ ವಂತಿಕೆಯನ್ನು ವರ್ಷಕ್ಕೆ ಒಂದು ಬಾರಿ ಪಾವತಿ ಮಾಡುತ್ತಿದ್ದು, ಹಾಗೂ ರೂ 20/- ರಂತೆ ಪ್ರತಿ ಕಾರ್ಮಿಕರಿಗೆ ಸರ್ಕಾರದಿಂದ ವಂತಿಕೆಯನ್ನು ಮಂಡಳಿಯು ಸ್ವೀಕರಿಸುತ್ತದೆ ಇದುವರೆಗೂ ಮಂಡಳಿಯಲ್ಲಿ ಕಾರ್ಮಿಕ ಕಲ್ಯಾಣ ನಿಧಿ ರೂ.199.23 ಕೋಟಿಗಳು ಸಂಗ್ರಹವಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಈ ನಿಧಿಯಿಂದ ಕಾರ್ಮಿಕ ವರ್ಗಕ್ಕೆ ಕಲ್ಪಿಸುತ್ತಿರುವ ಅಭಿವೃದ್ಧಿ ಯೋಜನೆಗಳು ಯಾವುವು; ಈ ಯೋಜನೆಗಳಿಗಾಗಿ ಇಲ್ಲಿಯವರೆಗೆ ಖರ್ಚಾಗಿರುವ ಮೊತ್ತವೆಷ್ಟು; (ಸಂಪೂರ್ಣ ವಿವರ ನೀಡುವುದು) | ಸಂಘಟಿತ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಕಲ್ಯಾಣ ಯೋಜನೆಗಳಡಿ ಸೌಲಭ್ಯಗಳನ್ನು ನೀಡಲಾಗುವುದು.<br><br>1) ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ<br>2) ಕಾರ್ಮಿಕರಿಗೆ ವೈದ್ಯಕೀಯ ನೆರವು<br>3) ಕಾರ್ಮಿಕರಿಗೆ ಅಪಘಾತ ಧನ ಸಹಾಯ<br>4) ಅಂಗವಿಕಲ ಕಾರ್ಮಿಕರಿಗೆ ಕೃತಕ ಅಂಗಸಾಧನ ಖರೀದಿಸಲು ಧನ ಸಹಾಯ<br>5) ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ<br>6) ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ<br>7) ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನ ಸಹಾಯ<br>8) ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಸೌಲಭ್ಯ (2021-22ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗಿದೆ) |

| | | |
|---|---|---|
| | | ಮಂಡಳಿಗೆ ವಂತಿಕೆ ಪಾವತಿಸುವ ಕಾರ್ಖಾನೆಗಳು/ ಕಾರ್ಯ ಸಂಸ್ಥೆಗಳ ಕಾರ್ಮಿಕರಿಗೆ ಹಾಗೂ ಅವರ ಅವಲಂಬಿತರಿಗೆ ಮಂಡಳಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕಲ್ಯಾಣ ಯೋಜನೆಗಳು, ಆಡಳಿತಾತ್ಮಕ ವೆಚ್ಚ ಮತ್ತು ಮಂಡಳಿ ಆಸ್ತಿ ಅಭಿವೃದ್ಧಿಗಾಗಿ ಮಂಡಳಿ ಸಭೆಯ ನಿರ್ಣಯದಂತೆ ಮಂಡಳಿ ನಿಧಿಯಿಂದ ಖರ್ಚು ಮಾಡಲಾಗುತ್ತದೆ.<br><br>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕಲ್ಯಾಣ ಯೋಜನೆಗಳಡಿ ಇಲ್ಲಿಯವರೆಗೆ ರೂ. 49.67 ಕೋಟಿಗಳು ವೆಚ್ಚವಾಗಿದ್ದು, ಉಳಿಕೆ ಮೊತ್ತವನ್ನು ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳ ನಿಶ್ಚಿತ ಠೇವಣಿಯಲ್ಲಿ ತೊಡಗಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ) | ಈ ಯೋಜನೆಗಳಲ್ಲಿ ಸಾಕಷ್ಟು ದುರುಪಯೋಗಗಳು ಆಗುತ್ತಿದ್ದು, ಈ ಸೌಲಭ್ಯಗಳು ಕಾರ್ಮಿಕರಿಗೆ ಸಕಾಲದಲ್ಲಿ ತಲುಪುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? | ಸಂಘಟಿತ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಕಲ್ಯಾಣ ಯೋಜನೆಗಳಡಿ ಸೌಲಭ್ಯಗಳನ್ನು ಸಕಾಲದಲ್ಲಿ ನೀಡಲಾಗುತ್ತಿದ್ದು, ಯಾವುದೇ ದುರುಪಯೋಗದ ಪ್ರಕರಣಗಳು ಕಂಡುಬಂದಿರುವುದಿಲ್ಲ. |

**ಕಾಇ 182 ಎಲ್‌ಇಟಿ 2022**

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರ

# ಅನುಬಂಧ

## ಕಾರ್ಮಿಕರಿಂದ ಸಂಗ್ರಹವಾಗಿರುವ ವಂತಿಕೆ ಮೊತ್ತ ಮತ್ತು ವೆಚ್ಚದ ವಿವರಗಳು

(ರೂ. ಕೋಟಿಗಳಲ್ಲಿ)

| ಕ್ರ ಸಂ. | ವರ್ಷ | ಕಾರ್ಮಿಕರು & ಮಾಲೀಕರಿಂದ ಸಂಗ್ರಹವಾದ ವಂತಿಕೆ ಮೊತ್ತ | ಸರ್ಕಾರದಿಂದ ಬಿಡುಗಡೆಯಾದ ವಂತಿಕೆ ಮೊತ್ತ | ಸಂಗ್ರಹವಾಗಿರುವ ಒಟ್ಟು ವಂತಿಕೆ ಮೊತ್ತ | ಖರ್ಚಾಗಿರುವ ಮೊತ್ತ |
|---|---|---|---|---|---|
| 1 | 2006-07 | 1.32 | 0 | 1.32 | 0 |
| 2 | 2007-08 | 1.57 | 0 | 1.57 | 0.16 |
| 3 | 2008-09 | 1.72 | 1.00 | 2.72 | 0.38 |
| 4 | 2009-10 | 1.79 | 0.24 | 2.03 | 0.88 |
| 5 | 2010-11 | 1.96 | 0.25 | 2.21 | 0.36 |
| 6 | 2011-12 | 4.08 | 0.25 | 4.33 | 1.03 |
| 7 | 2012-13 | 4.38 | 1.00 | 5.38 | 1.28 |
| 8 | 2013-14 | 4.95 | 1.37 | 6.32 | 1.02 |
| 9 | 2014-15 | 5.79 | 2.57 | 8.36 | 2.18 |
| 10 | 2015-16 | 5.94 | 2.25 | 8.19 | 1.65 |
| 11 | 2016-17 | 6.44 | 2.40 | 8.84 | 2.71 |
| 12 | 2017-18 | 20.63 | 6.00 | 26.63 | 7.28 |
| 13 | 2018-19 | 23.40 | 5.00 | 28.40 | 8.75 |
| 14 | 2019-20 | 24.78 | 7.18 | 31.96 | 10.69 |
| 15 | 2020-21 | 24.75 | 6.00 | 30.75 | 6.28 |
| 16 | 2021-22 | 24.22 | 6.00 | 30.22 | 5.02 |
| | ಒಟ್ಟು | **157.72** | **41.51** | **199.23** | **49.67** |